ಶ್ರೀ ಕೆ. ಬಿ. ಮಲ್ಲಪ್ಪ.—ಹರಿಜನರಿಗೆ ಮತ್ತು ದುರ್ಬಲವರ್ಗದವರಿಗೆ ನಿವೇಶನಗಳನ್ನು ಹಂಚುವ ವ್ಯವಸ್ಥೆ ಮಾಡಿದ್ದೀರಾ ? ಅವರಿಗೆ ಪೊಸಿಷನ್ ಕೊಟ್ಟೀದ್ದೀರಾ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಸೈಟುಗಳನ್ನು ಅವರ ಸ್ವಾಧೀನಕ್ಕೆ ಕೊಟ್ಟಿದ್ದೇವೆ.

ಶ್ರೀ ಕೆ. ಬಿ. ಮಲ್ಲಪ್ಪ.—ಕೆಲವರಿಗೆ ಸೈಟುಗಳನ್ನು ಕೊಟ್ಟಿದ್ದರೂ ಅದರ ಹಕ್ಕು ಪತ್ರವನ್ನು ಕೊಟ್ಟಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಅಂಥ ದೂರುಗಳು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ಗುಡಿಸಲುಗಳನ್ನು ಕಟ್ಟಿಕೊಳ್ಳಲು ದುಡ್ಡು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ನಾನು ಈ ಗುಡಿಸಲುಗಳನ್ನು ಹೋಗಿ ನೋಡಿಕೊಂಡು ಬರೋಣವೆಂದು ಹೋಗಿದ್ದಾಗ, ತಾವು ಎಲ್ಲಿಯೂ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಹಣವನ್ನು ಕೊಟ್ಟೇ ಇಲ್ಲ. ಇದು ಬೋಗಸ್ ಫಿಗರ್ಸ್. ಅಲ್ಲವೆ ? ಯಾವ ಊರಿನಲ್ಲಿ ನೀವು ದುಡ್ಡು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ !

ಶ್ರೀ ಪಿ. ಎಫ್. ರೋಡ್ರಿಗ್ಸ್.—ಯಾವ ಊರಿಗೆ ದುಡ್ಡು ಕೊಟ್ಟಿದೆ ಎಂಬುದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, (ಈ) ಪ್ರಶ್ನೆಗೆ ಉತ್ತರಿಸುತ್ತಾ,

"ಅಡಚಣೆಗಳನ್ನು ತೊಡೆದು ಹಾಕಿ ಹಾಗೂ ಸರಹದ್ದು ಕಲ್ಲುಗಳನ್ನು ಪುನಃ ನೆಡಲಾಗಿದೆ. ನಿವೇಶನಗಳನ್ನು ಗೊತ್ತುಪಡಿಸಿದವರಿಗೆ ಪುನಃ ಸ್ವಾಧೀನಕ್ಕೆ ಕೊಡಲಾಗಿದೆ"

ಎಂದು ಹೇಳಿದ್ದೀರಿ. ಆದರೆ ಆ ಜಮೀನಿನ ಒಡೆಯರು ಈ ದುರ್ಬಲ ವರ್ಗದ ಜನರ ಮೇಲೆ ದಬ್ಬಾಳಿಕೆ ನಡೆಸಿ ಗುಡಿಸಲುಗಳನ್ನು ಕಟ್ಟಿಕೊಳ್ಳಲು ತಂದು ಇಟ್ಟುಕೊಂಡಿದ್ದ ಸಾಮಾನುಗಳನ್ನೆಲ್ಲಾ ನಾಶ ಮಾಡಿ ಗುಡಿಸಲುಗಳಿಗೆ ಬೆಂಕಿ ಇಟ್ಟು ಅವರನ್ನು ಅಲ್ಲಿಂದ ಓಡಿಸಿದ್ದಾರೆ. ಆದ್ದರಿಂದ ಆ ಜಮೀನ್ದಾರರ ಮೇಲೆ ಕ್ರಮ ತೆಗೆದುಕೊಂಡು ಈ ದುರ್ಬಲವರ್ಗದವರೆಂದು ತಾವು ಯಾರ್ಯಾರಿಗೆ ಸೈಟುಗಳನ್ನು ಕೊಟ್ಟಿದ್ದೀರಿ ಅವರಿಗೇ ಮತ್ತೆ ಸೈಟುಗಳನ್ನು ಕೊಡುತ್ತೀರಾ ಅಲ್ಲದೆ ತೊಂದರೆಗೊಳಗಾಗಿರುವ ಇವರಿಗೆ ಏನಾದರೂ ಪರಿಹಾರವನ್ನು ಕೊಡುತ್ತೀರಾ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಮನೆಗಳನ್ನು ಸುಟ್ಟು ಹಾಕಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ಸರ್ಕಾರದವರು ಈ ಜನಗಳಿಗೆ ನಿವೇಶನಗಳನ್ನು ಕೊಟ್ಟ ಮೇಲೆ, ಆ ಜಮೀನ್ದಾರರು ಅವರನ್ನು ಅಲ್ಲಿಂದ ಓಡಿಸಿ ಆ ಜಮೀನನ್ನು ಉತ್ತು, ಬಿತ್ತಿ ಬೆಳೆ ಬೆಳೆದಿದ್ದಾರೆ.

ಶ್ರೀ ಪಿ. ಎಫ್. ರೋಡ್ರಿಗ್ಸ್.— ಆ ಜನರಿಗೆ ಸೈಟುಗಳನ್ನು ಫಾರ್ಮೇಷನ್ ಮಾಡಿ, ಕಲ್ಲುಗಳನ್ನು ನೆಟ್ಟು ಮಾರ್ಕ್ ಮಾಡಿ ಕೊಟ್ಟಿದ್ದೇವೆ. ನಂತರ ಈ ಭೂ ಮಾಲೀಕರು ಇಟ್ಟಿದ್ದ ಬೆಳೆಯನ್ನು ತಹಸೀಲ್ದಾರ್‌ರವರು ಬಂದು ತಾ॥ ೪ನೇ ಆಗಸ್ಟ್ ೧೯೭೮ ಹಾಗೂ ೨೮ನೇ ಆಗಸ್ಟ್ ೧೯೭೮ರಂದು ಪರಾಜು ಹಾಕಿ ಬಂದ ದುಡ್ಡನ್ನು ಇವರಿಗೆ ಪರಿಹಾರವಾಗಿ ಕೊಟ್ಟಿದ್ದಾರೆ. In respect of this unauthorised one, a complaint has been lodged at the police station.

1-30 P.M.

Enquiry in regard to the affairs of the Bellary Municipal Council.

912 SRI M. RAMAPPA (Kurugodu).—Will the Minister for Municipal Administration be pleased to state :—

(a) whether an enquiry was conducted by the Divisional Commissioner, Gulbarga in regard to the affairs of the Bellary City Municipal Council in 1977-78 and if so what were its findings.

(b) what action the Government has taken or propose to take against those found guilty ? (Officials as well as non-officials).

SRI H. C. SRIKANTAIAH (Minister for Municipal Administration).-

(a) Yes. The report of the Divisional Commissioner is under examination.

(b) The Controller, State Accounts Department has been requested to take up the audit of the accounts of the City Municipal Council and send his report to Government. Action will be taken after considering the report of Controller, State Accounts Department, as well as the findings of the Divisional Commissioner.

ಶ್ರೀ ಬಿ. ಇ. ರಾಮಯ್ಯ.—ಸ್ವಾಮಿ, ೧೯೭೬-೧೯೭೮ರಲ್ಲಿ ಬಳ್ಳಾರಿ ಮುನಿಸಿಪಾಲಿಟಿಯಲ್ಲಿ ನಡೆದಂಥ ಅಕ್ರಮದ ಬಗ್ಗೆ ವಿಭಾಗಾಧಿಕಾರಿಗಳು ತಿಳಿಸಿ ಸೂಪರ್‌ಸೀಡ್ ಮಾಡಬೇಕೆಂದು ವರದಿ ಮಾಡಲಿಲ್ಲವೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿಯೇ ಇದೆ.

ಶ್ರೀ ಬಿ. ಇ. ರಾಮಯ್ಯ.—ಮಾನ್ಯ ಮಂತ್ರಿಗಳು ಇನ್ನೂ ಪರಿಶೀಲನೆಯಲ್ಲಿಯೇ ಇದೆ ಎಂದು ಹೇಳಿದರು. ಈಗಾಗಲೇ ೨-೩ ವರ್ಷಗಳಾಗಿರುತ್ತದೆ. ಇನ್ನು ಎಷ್ಟು ವರ್ಷಬೇಕಾಗುತ್ತದೆ ? ಒಂದು ನಿರ್ದಿಷ್ಟವಾದ ಉತ್ತರ ಕೊಡಬೇಕೆಂದು ಕೇಳುತ್ತೇನೆ.

†ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇನ್ನು ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್ ಅವರು ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅವರಿಂದ ಪರಿಶೀಲನೆ ರಿಪೋರ್ಟ್ ಬಂದಮೇಲೆ ಅದರ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಇನ್ನು ಎಷ್ಟು ಕಾಲಬೇಕು ಎಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್ ಅವರಿಂದ ರಿಪೋರ್ಟ್ ಬರಬೇಕು. ಅದು ಬಂದಮೇಲೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ಎರಡು ವರ್ಷಗಳಾದರೂ ಸ್ಟೇಟ್ ಅಕೌಂಟ್ಸ್ ಅವರಿಂದ ರಿಪೋರ್ಟ್ ಬಂದಿರುವುದಿಲ್ಲವೆಂದರೆ ಇನ್ನು ಐದು ವರ್ಷಗಳು ಬೇಕಾಗುತ್ತದೆಯೇ ? ಎಷ್ಟು ವರ್ಷಕಾಲಬೇಕಾಗುತ್ತದೆ ಎನ್ನುವುದಕ್ಕೆ ನಿರ್ದಿಷ್ಟವಾಗಿ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಕೌಂಟ್ಸ್ ಆಡಿಟ್ ಆಗಿ ಡಿವಿಜನಲ್ ಕಮಿಷನರ್‌ರವರಿಗೆ ಬರುವತನಕ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತು ಅಲ್ಲಿ ಡಾಕ್ಯುಮೆಂಟ್ ಏನು ಹೆಚ್ಚುಕಡಿಮೆಯಾಗದಂತೆ ನೋಡಿಕೊಳ್ಳಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ಆದಷ್ಟು ಜಾಗ್ರತೆ ರಿಪೋರ್ಟ್‌ನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸ್ಟೇಟ್ ಅಕೌಂಟ್ಸ್ ಆಫೀಸರಿಂದ ರಿಪೋರ್ಟ್ ಬಂದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.